# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 10 (13)

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 27-01-2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಸೌಲಭ್ಯ ನೀಡಲಾಗಿದೆ: (ತಾಲ್ಲೂಕುವಾರು ವಿವರ ನೀಡುವುದು): | ಕಳೆದ 3 ವರ್ಷಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯಡಿ ಒಟ್ಟು 6969 ಫಲಾನುಭವಿಗಳಿಗೆ ಸೌಲಭ್ಯವನ್ನು ನೀಡಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ. |

| ಕ್ರ. ಸಂ. | ತಾಲ್ಲೂಕು | 2022-23 | 2023-24 | 2024-25 | ಒಟ್ಟು |
|---|---|---|---|---|---|
| 1 | ಚಿಕ್ಕಮಗಳೂರು | 120 | 154 | 197 | 471 |
| 2 | ಕಡೂರು | 753 | 1440 | 3349 | 5542 |
| 3 | ತರೀಕೆರೆ | 221 | 94 | 382 | 697 |
| 4 | ಮೂಡಿಗೆರೆ | 5 | 1 | 19 | 25 |
| 5 | ಕೊಪ್ಪ | 20 | 10 | 17 | 47 |
| 6 | ಶೃಂಗೇರಿ | 1 | 36 | 31 | 68 |
| 7 | ನರಸಿಂಹರಾಜ ಪುರ | 35 | 8 | 76 | 119 |
| | **ಒಟ್ಟು** | **1155** | **1743** | **4071** | **6969** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಇದರಲ್ಲಿ ರೈತರಿಗೆ ಎಷ್ಟು ಸಹಾಯಧನ (ಸಬ್ಸಿಡಿ) ನೀಡಲಾಗುತ್ತಿದೆ; ರೈತರು ಭರಿಸಬೇಕಾದ ವಂತಿಗೆ ಎಷ್ಟು; | ಹನಿ ನೀರಾವರಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಮೊದಲ 2.00 ಹೆಕ್ಟೇರ್‌ವರೆಗೆ ಶೇ.90 ರಷ್ಟು ಮತ್ತು 2.00 ಹೆಕ್ಟೇರ್ ಮೇಲ್ಪಟ್ಟು 5.00 ಹೆಕ್ಟೇರ್‌ವರೆಗೂ ಶೇ.45 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ರೈತರ ವಂತಿಕೆ ಅನುಕ್ರಮವಾಗಿ ಮೊದಲ 2.00 ಹೆಕ್ಟೇರ್ ವರೆಗೆ ಶೇ.10 ರಂತೆ ಮತ್ತು 5.00 ವರೆಗೆ ಶೇ.55 ರಂತೆ ಭರಿಸಬೇಕಾಗಿದೆ. |
| ಇ) | ಪ್ರಸಕ್ತ ವರ್ಷದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹನಿ ನೀರಾವರಿ ಸೌಲಭ್ಯ ಪಡೆದಿರುವ ಎಷ್ಟು ರೈತರಿಗೆ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇದೆ; ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; (ತಾಲ್ಲೂಕುವಾರು ವಿವರ ನೀಡುವುದು); | ಹನಿ ನೀರಾವರಿ ಸೌಲಭ್ಯ ಪಡೆದಿರುವ ರೈತರ ಸಹಾಯಧನವನ್ನು ಹನಿ ನೀರಾವರಿ ಅಳವಡಿಸಿದ ಕಂಪನಿಗಳ ಮೂಲಕ ನೀಡಲಾಗುತ್ತಿದ್ದು ರೈತರಿಗೆ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹನಿ ನೀರಾವರಿ ಸೌಲಭ್ಯ ಪಡೆದಿರುವ ಎಲ್ಲಾ ರೈತರಿಗೆ ಕೇಂದ್ರ ಪಾಲು ಹಾಗೂ ರಾಜ್ಯ ಕಡ್ಡಾಯ ಪಾಲಿನ ಅನುದಾನವನ್ನು ನೀಡಲಾಗಿದೆ. ರಾಜ್ಯ ಹೆಚ್ಚುವರಿ ಪಾಲಿನ (TOP UP) ಅನುದಾನವನ್ನು ಕಂಪನಿಗಳಿಗೆ ಬಿಡುಗಡೆಗೆ ಮಾಡಲು ಬಾಕಿ ಇದ್ದು, ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ:- |

| ಕ್ರ. ಸಂ | ತಾಲ್ಲೂಕುಗಳು | ಫಲಾನುಭವಿಗಳ ಸಂಖ್ಯೆ | ಬಿಡುಗಡೆಗೆ ಬಾಕಿ ಇರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಚಿಕ್ಕಮಗಳೂರು | 271 | **52.59** |

<table>
<tr>
<td></td>
<td></td>
<td>
<table>
<tr><td>2</td><td>ಕಡೂರು</td><td>3224</td><td>677.24</td></tr>
<tr><td>3</td><td>ಕೊಪ್ಪ</td><td>44</td><td>8.00</td></tr>
<tr><td>4</td><td>ಮೂಡಿಗೆರೆ</td><td>3</td><td>1.08</td></tr>
<tr><td>5</td><td>ನರಸಿಂಹರಾಜ ಪುರ</td><td>47</td><td>8.75</td></tr>
<tr><td>6</td><td>ಶೃಂಗೇರಿ</td><td>21</td><td>2.85</td></tr>
<tr><td>7</td><td>ತರೀಕೆರೆ</td><td>223</td><td>68.28</td></tr>
<tr><td colspan="2">ಒಟ್ಟು</td><td>3833</td><td>818.79</td></tr>
</table>
ಈ ಕುರಿತಂತೆ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಪರಿಶೀಲನೆಯ ಹಂತದಲ್ಲಿದೆ.
</td>
</tr>
<tr>
<td>ಈ)</td>
<td>ಸಹಾಯಧನ ಪಡೆಯುವಲ್ಲಿ ಏಜೆನ್ಸಿಗಳಿಂದ ರೈತರಿಗೆ ಸಮಸ್ಯೆಯುಂಟಾಗುತ್ತಿರುವ ಬಗ್ಗೆ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?(ವಿವರ ಒದಗಿಸುವುದು);</td>
<td>ಸಹಾಯಧನ ಪಡೆಯುವಲ್ಲಿ ಏಜೆನ್ಸಿಗಳಿಂದ ರೈತರಿಗೆ ಉಂಟಾಗುತ್ತಿರುವ ಸಮಸ್ಯೆ ಏನೆಂದರೆ ಹನಿ ನೀರಾವರಿ ಅಳವಡಿಕೆಗೆ ಸೂಕ್ಷ್ಮ ನೀರಾವರಿ ಕಂಪನಿ ಏಜೆನ್ಸಿಗೆ ಇಲಾಖೆಯಿಂದ ರೈತರ ತಾಕುಗಳಲ್ಲಿ ಘಟಕ ಅಳವಡಿಸಲು ಕಾರ್ಯಾದೇಶಗಳನ್ನು ನೀಡಿದ 40 ದಿನಗಳ ಒಳಗಾಗಿ ರೈತರ ತೋಟಗಳಲ್ಲಿ ಹನಿ ನೀರಾವರಿ ಘಟಕ ಅಳವಡಿಸಿ ಈ ಸಂಬಂಧ ದಾಖಲೆಗಳನ್ನು ಸದರಿ ಏಜೆನ್ಸಿ ವತಿಯಿಂದ ಹಸಿರು ತಂತ್ರಾಂಶದಲ್ಲಿ Upload ಮಾಡಬೇಕು. ಈ ಕಾಲಮಿತಿಯಲ್ಲಿ ಏಜೆನ್ಸಿಗಳು Upload ಮಾಡದೇ ಇರುವ ಬಗ್ಗೆ ದೂರುಗಳು ಸಲ್ಲಿಕೆಯಾಗಿರುತ್ತವೆ. ಅಂತಹ ಪ್ರಕರಣಗಳನ್ನು ಪರಿಶೀಲಿಸಿ, ರೈತರಿಂದ ಮನವಿ ಪಡೆದು ಮತ್ತೊಮ್ಮೆ ಫಲಾನುಭವಿ ಸಂಖ್ಯೆ (Beneficiery Identification Number) ಅನ್ನು ಸೃಜಿಸಿ ಸಹಾಯಧನ ಮಂಜೂರು ಮಾಡಲು ಅಗತ್ಯ ಕ್ರಮ ವಹಿಸಲಾಗುತ್ತಿದೆ.<br><br>ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂತಹ ದೂರುಗಳು ಬಂದಿರುವುದಿಲ್ಲ.</td>
</tr>
</table>

**ಸಂಖ್ಯೆ: HORTI 37 HGM 2026**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**